# ವೈದೇಹಿಯವರ ಕೆಲವು ಕಥೆಗಳ ಅವಲೋಕನ

**ರೇಣುಕಪ್ರಸಾದ್ ಬಿ.ಆರ್.***

**DOI: https://doi.org/10.5281/zenodo.22301071**

**ABSTRACT**

ಖ್ಯಾತ ಕನ್ನಡ ಲೇಖಕಿ ವೈದೇಹಿಯವರ ಕತೆಗಳಲ್ಲಿನ ಸ್ತ್ರೀಪರ ಕಾಳಜಿ ಹಾಗೂ ಬದಲಾಗುತ್ತಿರುವ ಮಾನವೀಯ ಸಂಬಂಧಗಳ ಸೂಕ್ಷ್ಮ ಚಿತ್ರಣವನ್ನು ಇಲ್ಲಿ ಸಮಗ್ರವಾಗಿ ವಿಶ್ಲೇಷಿಸಲಾಗಿದೆ. 'ಮರ ಗಿಡ ಬಳ್ಳಿ' ಕತೆಯ ಮೂಲಕ ಆಧುನಿಕ ಸ್ವಾರ್ಥಮಯ ಜಗತ್ತಿನಲ್ಲಿ ಪೋಷಕರು ಮತ್ತು ಮಕ್ಕಳ ನಡುವಿನ ಯಾಂತ್ರಿಕ ಹಾಗೂ ಒಣ ಔಪಚಾರಿಕ ಸಂಬಂಧಗಳ ಶೋಧವನ್ನು ಮಾಡಲಾಗಿದೆ. 'ಅಕ್ಕು' ಕಥೆಯಲ್ಲಿ ಪುರುಷಪ್ರಧಾನ ಸಮಾಜದ ಮದುವೆ ಎಂಬ ಕಡ್ಡಾಯ ವ್ಯವಸ್ಥೆಯಿಂದ ಮಾನಸಿಕವಾಗಿ ಜರ್ಜರಿತಳಾಗುವ ಹೆಣ್ಣಿನ ದುರಂತ ಸ್ಥಿತಿಯನ್ನು ಮನೋವೈಜ್ಞಾನಿಕವಾಗಿ ವಿವರಿಸಲಾಗಿದೆ. 'ಶಕುಂತಲೆಯೊಂದಿಗೆ ಕಳೆದ ಅಪರಾಹ್ನ' ಕತೆಯಲ್ಲಿ ಪೌರಾಣಿಕ ಕಟ್ಟುಕತೆಗಳನ್ನು ಹೆಣ್ಣಿನ ದೃಷ್ಟಿಕೋನದಿಂದ ಮರುಪರಿಶೀಲಿಸಿ, ಪುರುಷರ ಲಂಪಟತ್ವವನ್ನು ಸಭ್ಯತೆಯ ಹೆಸರಿನಲ್ಲಿ ಮುಚ್ಚಿಡುವ ಪಾರಂಪರಿಕ ವ್ಯವಸ್ಥೆಯನ್ನು ತೀಕ್ಷ್ಣವಾಗಿ ಪ್ರಶ್ನಿಸಲಾಗಿದೆ. ಒಟ್ಟಾರೆಯಾಗಿ, ಸಾಂಪ್ರದಾಯಿಕ ಚೌಕಟ್ಟಿನೊಳಗೇ ಹೆಣ್ಣಿನ ಅಂತರಂಗದ ತಲ್ಲಣಗಳು ಮತ್ತು ಸಾಮಾಜಿಕ ಮುಖವಾಡಗಳನ್ನು ಬಯಲುಮಾಡುವ ವೈದೇಹಿಯವರ ಸೃಜನಶೀಲತೆಯ ಅನನ್ಯತೆಯನ್ನು ಕಟ್ಟಿಕೊಡಲಾಗಿದೆ.

**KEYWORDS**: ವೈದೇಹಿ, ಸ್ತ್ರೀಪರ ಕಾಳಜಿ, ಮಾನವೀಯ ಸಂಬಂಧಗಳು, ಪುರುಷಪ್ರಧಾನ ಸಮಾಜ, ಮಹಿಳಾ ಸಂವೇದನೆ.

* **ಡಾ. ರೇಣುಕಪ್ರಸಾದ್ ಬಿ.ಆರ್.**, ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತುಮಕೂರು.

ಜಾನಕಿ ಶ್ರೀನಿವಾಸಮೂರ್ತಿ ಅವರು ಕನ್ನಡ ಸಾಹಿತ್ಯ ಸಂದರ್ಭದಲ್ಲಿ 'ವೈದೇಹಿ' ಎಂಬ ಕಾವ್ಯನಾಮದಿಂದ ಚಿರಪರಿಚಿತರು. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಈ ಲೇಖಕಿ ಸಾಂಪ್ರದಾಯಿಕ ಚೌಕಟ್ಟಿನೊಳಗೆ ನವ್ಯತೆಯ ಚಿತ್ರಗಳನ್ನು ರಚಿಸುವುದರಲ್ಲಿ ಓದುಗರ ಗಮನ ಸೆಳೆದವರು. ತಾವು ಕಂಡು ಕೇಳಿದ ಬದುಕನ್ನೇ ಸಾಹಿತ್ಯವಾಗಿಸುವ ಈ ಲೇಖಕಿ ವಾಸ್ತವವಾದಿ ಬರಹಗಾರರಾಗಿದ್ದಾರೆ. ಕತೆ, ಕಾದಂಬರಿ, ಕವನ, ಪ್ರಬಂಧ, ಅಂಕಣ ಬರಹ ಮುಂತಾದ ವೈವಿಧ್ಯಮಯ ಪ್ರಕಾರಗಳಲ್ಲಿ ಸಾಹಿತ್ಯ ರಚನೆ ಮಾಡಿರುವ ಇವರು ಕತೆಗಳ ರಚನೆಯಲ್ಲಿ ಸಿದ್ಧಹಸ್ತರು. ಆಧುನಿಕ ಮನಸ್ಸುಗಳಿಗೆ ಹಿಂದಿನ ಪೀಳಿಗೆಯ ಹೆಣ್ಮಕ್ಕಳ ಜೀವನದ ಕಷ್ಟ ಸುಖಗಳನ್ನು ಹೇಳುತ್ತಲೇ ಅವರ ಬದುಕಿನೊಳಗಿನ ಅನಿರೀಕ್ಷಿತ ಪರೀಕ್ಷೆಗಳ ಮೂಲಕ ತಮ್ಮ ಸ್ತ್ರೀಪರ ಕಾಳಜಿಯನ್ನು ದಾಖಲಿಸಿದವರು. ಕುಟುಂಬ ಸಂಬಂಧಗಳು ಹಾಗೂ ಮಾನವೀಯ ಸ್ವಭಾವಗಳನ್ನು ಅತ್ಯಂತ ಸಹಜವಾದ ಸ್ಥಿತಿಯಲ್ಲಿ, ದೇಸಿನೆಲೆಯಲ್ಲಿ ಚಿತ್ರಿಸುವ ವೈದೇಹಿ ಅವರ ಕತೆಗಳಲ್ಲಿ ಸಾಂಸ್ಕೃತಿಕವಾದ ಹಾಗೂ ಸಾಮಾಜಿಕವಾದ ಚಲನಶೀಲತೆಯೊಳಗೆ ಮನುಷ್ಯಸ್ವಭಾವಗಳನ್ನು ಶೋಧಿಸುವ ಅಂಶವನ್ನು ಕಾಣಬಹುದು.

ಶತಮಾನದ ಸಣ್ಣ ಕಥೆಗಳ ಸಮೀಕ್ಷೆ ಕೃತಿಯಲ್ಲಿ ವೈದೇಹಿಯವರ ಕತೆಗಳನ್ನು ಕುರಿತಂತೆ ಕರೀಗೌಡ ಬೀಚನಹಳ್ಳಿಯವರು ಹೀಗೆ ಹೇಳುತ್ತಾರೆ. "ವೈದೇಹಿಯವರ ಕಥೆಗಳ ವಸ್ತು ಪ್ರಮುಖವಾಗಿ ಮಾನವೀಯ ಸ್ವಭಾವ ಮತ್ತು ಅವುಗಳ ಸಂಬಂಧಗಳನ್ನು ಸಾಮಾಜಿಕ ಸಂದರ್ಭದಲ್ಲಿಟ್ಟು ಶೋಧಿಸುತ್ತವೆ. ಹಾಗಾಗಿ ಅವರ ಕಥೆಗಳಿಗೂ ಒಂದು ನಿರ್ದಿಷ್ಟವಾದ, ಸಂಪ್ರದಾಯ ಬದ್ಧವಾದ ಸಾಂಸ್ಕೃತಿಕ ಪರಿಸರವಿದೆ. ಈ ಪರಿಸರದಲ್ಲಿ ಮಧ್ಯಮವರ್ಗದ ಸಂಪ್ರದಾಯಬದ್ಧ ಕುಟುಂಬದಲ್ಲಿ ಹೆಣ್ಣು ಎದುರಿಸುವ ಸಮಸ್ಯೆಗಳನ್ನು ಚಿತ್ರಿಸುತ್ತಾ ಅದರಿಂದ ಒಂದು ತಿಳುವಳಿಕೆಯನ್ನು ಮತ್ತು ಛಲವನ್ನು ಇವರ ಕಥೆಗಳು ಮೂಡಿಸುತ್ತವೆ."

ಇವರ ಕತೆಗಳಲ್ಲಿ ಒಂದಾದ 'ಮರ ಗಿಡ ಬಳ್ಳಿ' ಕತೆಯು ದೇಶ–ಕಾಲಗಳನ್ನು ಮೀರಿ ಎಲ್ಲಾ ಸಮಾಜದಲ್ಲೂ ನಡೆಯಬಹುದಾದ ಕತೆಯೊಂದರಂತೆ ಕಾಣುವುದು ವಿಶೇಷ. ಕತೆಯ ಕೇಂದ್ರ ಪಾತ್ರವಾದ ಮಂದಾಕಿನಿ ಮೂರು ಮಕ್ಕಳ ತಾಯಿಯಾಗಿದ್ದರೂ, ವೃದ್ಧೆಯಾಗಿ ಅನಾರೋಗ್ಯದಿಂದ ಹಾಸಿಗೆ ಹಿಡಿದಾಗ ಮಕ್ಕಳು ತನ್ನನ್ನು ನೋಡಿಕೊಳ್ಳುವ ರೀತಿಗೆ ಬೇಸರ ಪಟ್ಟು ನೊಂದುಕೊಳ್ಳುವ, ತನ್ನದೇ ಜೀವನವನ್ನು ಪುನರ್ ಅವಲೋಕಿಸುತ್ತಾ ಸ್ವಗತವೆಂಬಂತೆ ನುಡಿಯುವ ಸಾಲುಗಳೇ ಈ ಕತೆಯಾಗಿದೆ. ಹೆತ್ತು ಹೊತ್ತು, ಸಾಕಿ ಸಲಹಿದ ತಂದೆ ತಾಯಿಗಳನ್ನು ಅವರ ಮುಪ್ಪಿನ ಕಾಲದಲ್ಲಿ ಮಕ್ಕಳು ಹೇಗೆ ನೋಡಿಕೊಳ್ಳುತ್ತಾರೆ ಎಂಬ ವಿಚಾರದೊಂದಿಗೆ ಆಧುನಿಕ ಕಾಲಘಟ್ಟದ ಸ್ವಾರ್ಥಮಯ ಪ್ರಪಂಚ ಮನುಷ್ಯ ಸಂಬಂಧಗಳನ್ನು ಪರಿಭಾವಿಸುವ ರೀತಿಯನ್ನು ಕತೆಯಲ್ಲಿ ಮನಮುಟ್ಟುವಂತೆ ಚಿತ್ರಿಸಲಾಗಿದೆ.

ವಯಸ್ಸಾದ ತಾಯಿಯೊಬ್ಬಳು ಆಕಸ್ಮಿಕ ಅನಾರೋಗ್ಯಕ್ಕೀಡಾಗಿ ಹಾಸಿಗೆ

ಹಿಡಿದಾಗ ಅವಳೇ ಹೆತ್ತು ಹೊತ್ತು ಸಾಕಿ ಸಲಹಿದ ಮೂವರು ಮಕ್ಕಳು ಮೂರು ಮತ್ತೊಂದು ರೀತಿಯಲ್ಲಿ ನಡೆದುಕೊಳ್ಳುವುದು ತಾಯಿ ಹೃದಯವನ್ನು ಘಾಸಿಗೊಳಿಸುತ್ತದೆ. ಹಿರಿಯ ಮಗನಾದ ಶ್ರೀಧರ ಮತ್ತು ಆತನ ಹೆಂಡತಿ ಅನಿವಾರ್ಯವಾಗಿ ಸೇವೆಯನ್ನು ಮಾಡುತ್ತಾರೆಯೇ ಹೊರತು ಮನಃಪೂರ್ವಕವಾಗಿ ತಾಯಿಯ ಸೇವೆಯನ್ನು ಮಾಡುವುದಿಲ್ಲ. ಹಾಸಿಗೆ ಹಿಡಿದ ತಾಯಿಯನ್ನು ನೋಡಲು ಬರುವ ಒಬ್ಬಳೇ ಮಗಳು ಶಾರದೆ, ಅವಳಿಗೂ ಅಲ್ಲಿ ತಾಯಿಯ ಮೇಲಿನ ಪ್ರೀತಿ ಮಮತೆಗಿಂತ ಅದನ್ನು ತೋರ್ಪಡಿಸಿಕೊಳ್ಳುವುದರಲ್ಲೇ ಇರುವ ನಾಟಕೀಯತೆ ಎದ್ದು ಕಾಣುತ್ತದೆ. ಸ್ವಾರ್ಥದ ಕಾರಣಕ್ಕೋ ತಮ್ಮ ತಮ್ಮ ತೃಪ್ತಿಯ ಕಾರಣಕ್ಕೋ, ಸಂಬಂಧಗಳ ಮೂಲ ಆಶಯವನ್ನೇ ಮರೆತಂತೆ ನಡೆದುಕೊಳ್ಳುವ ಮಗಳು ಶಾರದೆಯ ಬಗ್ಗೆ ಅದುವರೆಗೂ ಇದ್ದ ಭಾವನೆ ಮತ್ತು ಅಭಿಪ್ರಾಯಗಳೇ ತಲೆಕೆಳಗಾಗುವ ರೀತಿಯಲ್ಲಿ, ಆಧುನಿಕ ಕಾಲದ ಸ್ವಭಾವಗಳಿಗೆ ಹಿಡಿದ ಕನ್ನಡಿಯಾಗುತ್ತದೆ ಈ ಸನ್ನಿವೇಶ.

ಇನ್ನು ಮೂರನೆಯ ಮಗ, ಅತ್ಯಂತ ಪ್ರೀತಿಪಾತ್ರನಾದ ಕಿರಿಯ ಮಗ ಸೂರ್ಯಮಣಿ. ಅಮೇರಿಕೆಯಲ್ಲಿ ಡಾಕ್ಟರ್ ಆಗಿರುವ ಈತನ ಬಗ್ಗೆ, ಆತನ ಬರುವಿಕೆಯ ಬಗ್ಗೆ ಹಾಸಿಗೆಯಲ್ಲೇ ಬಹು ನಿರೀಕ್ಷೆಗಳೊಂದಿಗೆ ಕನಸುಕಂಡ ತಾಯಿಗೆ ದೊಡ್ಡ ಆಘಾತದಂತೆ ಆತನ ವರ್ತನೆ! ಸಂಬಂಧಗಳಿಗೆ ಅವುಗಳ ನಡುವಿನ ವರ್ತನೆಗಳಿಗೆ 'ಒಣ ಔಪಚಾರಿಕತೆ'ಯ ಪಟ್ಟಿಯನ್ನು ಲೇಪಿಸುವ ನವನಾಗರೀಕತೆಯ ಲಕ್ಷಣಗಳು ಓದುಗರನ್ನು ಗಾಬರಿಗೊಳಿಸುತ್ತವೆ. ಪಾಶ್ಚಾತ್ಯ ಸಂಸ್ಕೃತಿಗೆ ಮಾರುಹೋಗುತ್ತಿರುವ ಆಧುನಿಕ ಕಾಲಘಟ್ಟದ ಮನಸ್ಸುಗಳು ನೆಲಮೂಲದ ಸೆಳತಗಳಿಂದ ದೂರವಾಗಿ, ಮಾನವೀಯ ಸಂಸ್ಕೃತಿಯ ನಡತೆಗಳನ್ನು 'ಒಣ ಔಪಚಾರಿಕತೆ'ಯ ಹೆಸರಿನಲ್ಲಿ ಯಾಂತ್ರಿಕಗೊಳಿಸುತ್ತಿರುವುದನ್ನು, ಪಾಶ್ಚಾತ್ಯ ಆಲೋಚನೆಗಳ ಬುದ್ಧಿಕೇಂದ್ರಿತ ನಿಲುವು ಹಾಗೂ ನೆಲಮೂಲದ ಆಲೋಚನೆಗಳ ಭಾವಕೇಂದ್ರಿತ ನಿಲುವುಗಳೊಂದಿಗೆ ಲೇಖಕಿ ಮುಖಾಮುಖಿಗೊಳಿಸುತ್ತಾರೆ. "ನಾನು ಗುಣಾಕಾರ, ಭಾಗಾಕಾರ ಹಾಕುತ್ತಲೇ ಇದ್ದೇನೆ. ಎಷ್ಟು ಎಣಿಸಿದರೂ ಶೂನ್ಯವೇ ಬರುತ್ತಿದೆ. ಲೆಕ್ಕ ತಪ್ಪಿತೆಂದು ಮತ್ತೆ ಎಣಿಸುತ್ತೇನೆ." ಎಂಬ ಮಂದಾಕಿನಿಯ ತಾಯಿ ಹೃದಯದ ಮಿಡಿತ ಆಧುನಿಕ ಬುದ್ಧಿಕೇಂದ್ರಿತ ನಿಲುವುಗಳನ್ನು ನಿರಾಕರಿಸುತ್ತಲೇ...... ಸಾಗುವುದನ್ನು..... ಕೊನೆಗೆ ಮಕ್ಕಳೆಲ್ಲರೂ ಸಭೆ ಸೇರಿ, ನರ್ಸ್ ಒಬ್ಬಳ ಆಶ್ರಯಕ್ಕೆ ತಾಯಿಯನ್ನು ಒಪ್ಪಿಸುವ ಸಂದರ್ಭದಲ್ಲಿ ತಾಯಿಯ ಕಿವಿಯಲ್ಲಿ ಯಾರೋ ಹೇಳಿದಂತಾಗುತ್ತದೆ "ಮನುಷ್ಯ ಕರ್ಮ ಮಾಡಲು ಮಾತ್ರ. ಫಲವನ್ನು ಆತ ಬಯಸಲೇಬಾರದು." ಇದು ಆಧ್ಯಾತ್ಮಿಕ ತತ್ತ್ವವೊಂದರಂತೆ ಕಾಣುವ ಮೂಲಕ ಭಾರತೀಯ ಬದುಕಿನ ಮೂಲಬೇರುಗಳನ್ನು ಶೋಧಿಸುವ ಹಂತಕ್ಕೆ ಕತೆ ನಡೆದುಬಂದಿತೇ ಎಂದನ್ನಿಸುವಂತೆ ಮಾಡಿದೆ. ಮನುಷ್ಯ ಸಂಬಂಧಗಳು ಮೇಲ್ನೋಟಕ್ಕಷ್ಟೇ ವಿನಃ ಅಂತರಂಗಕ್ಕೆ ಸ್ಪಂದಿಸುವುದೇ ಇಲ್ಲ ಎಂಬ ಧ್ವನಿಯೊಂದಿಗೆ ಮುಕ್ತಾಯವಾಗುವ ಕತೆ ಆಧುನಿಕ ಕಾಲಘಟ್ಟದಲ್ಲಿ ಸಂಬಂಧಗಳ ಪುನರ್ ವಿಶ್ಲೇಷಣೆಗೆ ಕಾರಣವಾಗುತ್ತದೆ.

ವೈದೇಹಿಯವರ ಮತ್ತೊಂದು ಕತೆ 'ಅಕ್ಕು'. ಅಕ್ಕುವಿನ ಜೀವನವನ್ನು ಕುರಿತು ಬರೆಯಲ್ಪಟ್ಟ ಇಲ್ಲಿನ ಸಾಲುಗಳು ಸಮಾಜದೊಳಗೆ 'ಮದುವೆ' ಎಂಬ ಅಲಿಖಿತ ಒತ್ತಾಯದ ಪ್ರಕ್ರಿಯೆಯಿಂದ ಮೂಡಿದ ಏರುಪೇರಿನಿಂದ ಹೆಚ್ಚು ತೊಂದರೆಯನ್ನು ಅನುಭವಿಸುವವಳು ಹೆಣ್ಣು ಎಂಬುದನ್ನು ಮನದಟ್ಟು ಮಾಡುತ್ತದೆ. ಸನ್ಯಾಸಿಯ ಹಿಂದೆ ಹೋದ ಗಂಡನನ್ನು ಕಳೆದುಕೊಂಡು ತವರು ಮನೆಗೆ ಬಂದು ಸೇರುವ ಅಕ್ಕುವಿನ ಬದುಕು ಹೇಗಿತ್ತು ಎಂಬುದನ್ನು ನಿರೂಪಕಿ ಕತೆಯ ರೂಪದಲ್ಲಿ ಹೇಳಿದ್ದಾರೆ. ಅಕ್ಕುವಿನ ಮನಸ್ಸಿನ ಸ್ಥಿತಿಯನ್ನು ಮನಃಶಾಸ್ತ್ರದ ಹಿನ್ನೆಲೆಯಲ್ಲಿ ವಿವರಿಸುವ ಈ ಕತೆ ಸಿರಿಯತ್ತೆಯ ಮದುವೆಯ ಸಂದರ್ಭದಲ್ಲಿ ಅವಳ ಅಲಂಕಾರವನ್ನು ಹಾಳುಮಾಡುವ, ತನಗೊಬ್ಬ ಗಂಡ ಬೇಕೆಂದು ಪೀಡಿಸುವ, ತಾನು ಬಸುರಿ ಬಾಣಂತಿ ಆಗಿದ್ದೇನೆಂದು ಅಭಿನಯಿಸುವ ಘಟನೆಗಳ ಮೂಲಕ 'ಅಕ್ಕ'ವಿನ ಮಾನಸಿಕ ಸ್ಥಿತಿಯನ್ನು ವಿಶ್ಲೇಷಣೆ ಮಾಡುವ ಕಾರ್ಯಕ್ಕೆ ಇಳಿಯುತ್ತದೆ. ತನ್ನ ಹುಚ್ಚಿನ ಮೂಲಕವೇ ಅಕ್ಕು ಸಾಂಪ್ರದಾಯಿಕ ಪುರುಷಪ್ರಧಾನ ಕುಟುಂಬ ಮತ್ತು ಸಮಾಜದಲ್ಲಿ ತನ್ನನ್ನು ಪ್ರಶ್ನಿಸಿದವರ ಮುಖವಾಡಗಳನ್ನು ಬಯಲು ಮಾಡುತ್ತಾ ಸಾಗುತ್ತದೆ.

'ಶಕುಂತಲೆಯೊಂದಿಗೆ ಕಳೆದ ಅಪರಾಹ್ನ' ವೈದೇಹಿಯವರ ಮತ್ತೊಂದು ಕತೆ. ದುಷ್ಯಂತ ಮತ್ತು ಶಕುಂತಲೆಯರ ಪ್ರೇಮಪುರಾಣವನ್ನು ಹೊಸಬಗೆಯಿಂದ ವಿಶ್ಲೇಷಿಸುವ ಇಲ್ಲಿ ಲೇಖಕಿಯ ಸ್ತ್ರೀಪರ ದೃಷ್ಟಿಕೋನವನ್ನು ಗುರುತಿಸಬಹುದಾಗಿದೆ. ಶಕುಂತಲೆಯ ಸ್ವಗತವೆಂಬಂತೆ ಪ್ರಾರಂಭವಾಗುವ ಈ ಕತೆ ಪುರುಷ ಪ್ರಧಾನ ಸಮಾಜದಲ್ಲಿ ತನ್ನದಲ್ಲದ ತಪ್ಪಿನಿಂದ ಶೋಷಿಸಲ್ಪಟ್ಟ ಬಹಳಷ್ಟು ಹೆಣ್ಮಕ್ಕಳ ಹೃದಯ ವೇದನೆಯಂತೆ, ಪುರುಷ ತನ್ನ ತಪ್ಪು ಮರೆಮಾಚುವಿಕೆಗಾಗಿ ಏನೆಲ್ಲಾ ಕಟ್ಟುಕತೆಗಳನ್ನು ಕಟ್ಟಿ ಸಮಾಜದಲ್ಲಿ ಸಭ್ಯತೆಯ ಮುಖವಾಡದೊಳಗೆ ಮನ್ನಣೆಗೆ ಪಾತ್ರವಾಗುತ್ತಾನೆ ಎಂಬ ಧ್ವನಿಯನ್ನು ಹೊರಡಿಸುತ್ತದೆ.

ಕಣ್ವರ ಸಾಕುಮಗಳಾದ ಶಕುಂತಲೆಯನ್ನು ದುಷ್ಯಂತ ಗಾಂಧರ್ವ ವಿವಾಹವಾಗಿ ಆಶ್ರಮದಲ್ಲೇ ಬಿಟ್ಟು ಹೋದದ್ದು, ನಂತರ ದೂರ್ವಾಸ ಮುನಿಗಳ ಶಾಪ, ಆ ಕಾರಣದಿಂದಲೇ ದುಷ್ಯಂತ ಶಕುಂತಲೆಯನ್ನು ಮರೆತದ್ದು, ನಂತರದಲ್ಲಿ ಶಕುಂತಲೆ ಮಾರೀಚ ಮುನಿಗಳ ಆಶ್ರಮದಲ್ಲಿ ಭರತನಿಗೆ ಜನ್ಮಕೊಟ್ಟದ್ದು ಇತ್ಯಾದಿ ಇತ್ಯಾದಿ. ಪುರುಷಪ್ರಧಾನ ಸಮಾಜ ರಚಿಸಿದ ಪ್ರೇಮಪುರಾಣ. ದುಷ್ಯಂತನದೇನೂ ತಪ್ಪಿಲ್ಲ ಎಂಬುದನ್ನು ಮತ್ತು ಶಕುಂತಲೆಯ ದುರ್ವಿಧಿಯನ್ನು ಚಿತ್ರಿಸಲು ರಚಿಸಿದ ಕಟ್ಟುಕತೆ! ಅದನ್ನೇ ಶಕುಂತಲೆಯ ದೃಷ್ಟಿಕೋನದಲ್ಲಿ ನೋಡಿದಾಗ ಪುರುಷಪ್ರಾಧಾನ್ಯತೆಯ ಸಮಾಜದೊಳಗಿನ ಹುನ್ನಾರಗಳು ಗೋಚರವಾಗುತ್ತವೆ. ದೂರ್ವಾಸ ಮುನಿಗಳು ನನ್ನನ್ನು ಬಾಲ್ಯದಿಂದ ಬಲ್ಲವರು, ಅವರು ಬಂದಾಗಲೆಲ್ಲಾ ಅವರ ತೊಡೆಯೇರಿ ಕುಳಿತುಕೊಳ್ಳುತ್ತಿದ್ದ ನನ್ನನ್ನು "ಮಗಳೇ ನೋವಿಲ್ಲದ ಬದುಕು ಅಪರೂಪ, ಅಂತಹ ಅಪರೂಪದ ಬದುಕು ನಿನ್ನದಾಗಲಿ" ಎಂದು ಹರಸುತ್ತಿದ್ದ ದೂರ್ವಾಸರು ನನಗೇಕೆ ಶಾಪಕೊಡುತ್ತಾರೆ ಎಂಬ ಶಕುಂತಲೆಯ ಮಾತುಗಳಲ್ಲಿ ವಾಸ್ತವತೆಯ ಜೀವಂತಿಕೆ ಇರುವುದನ್ನು ಕಾಣಬಹುದು.

ಕತೆಯ ಮುಂದುವರಿದ ಭಾಗದಲ್ಲಿ ದೂರ್ವಾಸರ ಪ್ರಸಂಗವನ್ನು ಕುರಿತಂತೆ ಶಕುಂತಲೆ ಹೀಗೆ ಹೇಳುತ್ತಾಳೆ "ಕವಿ, ಶಾಪ–ಗೀಪ ಇತ್ಯಾದಿಗಳನ್ನೆಲ್ಲಾ ಅಡ್ಡವಿಟ್ಟು ಪುರುಷರ ಲಂಪಟತ್ವ ಮುಚ್ಚಿಡಲು ಹವಣಿಸಿದ. ಎಲ್ಲಾ ಜಾಣ ಮರೆವಿನ ಮಲ್ಲರನ್ನು ತನ್ನ ತೆಕ್ಕೆಯೊಳಗೆ ಸುರಕ್ಷಿತವಾಗಿಸುವ, ಪುರುಷ ಕಟ್ಟಿದ ವಿಸ್ಮರಣೆಯ ಕಂತೆ, ರುಚಿಸಲೇಬೇಕು. ಎಷ್ಟೇ ಆಗಲಿ ಕಾವ್ಯ ಮೀಯುವುದು ತನಗೇ ಬೇಕಾದ ಸುಖೋಷ್ಣ ಕಲ್ಪನೆಯಲ್ಲಿ." ಇಂತಹ ಶಕುಂತಲೆಯ ಅಂತರಂಗದ ಮಾತುಗಳ ಮೂಲಕ ಪುರುಷ ಸಮಾಜದ ಪಾರಂಪರಿಕ ದೌರ್ಜನ್ಯಗಳನ್ನು ಪ್ರಶ್ನಿಸುವ, ಅವರ ಲಂಪಟತ್ವಕ್ಕೆ ಮರೆವಿನ ಮುಸುಕು ಹೊದಿಸಿದ ಅವರನ್ನು ಸಭ್ಯರೆಂದೇ ಗೌರವಿಸಿದ ವ್ಯವಸ್ಥೆಯನ್ನು ಲೇಖಕಿ ಖಂಡಿಸುತ್ತಾರೆ. ಕತೆಯ ಕೊನೆಯ ಮಾತುಗಳಲ್ಲಿ ಶಕುಂತಲೆಯನ್ನು ಕುರಿತಂತೆ "ಈಕೆ ಯಾರು? ಪ್ರೇಮಿಯೇ? ವಿರಹಿಣಿಯೇ? ತಪಸ್ವಿನಿಯೇ? ಅಥವಾ ಈ ಎಲ್ಲದರ ಪರಿಪಾಕವೇ? ಅಥವಾ ಎಲ್ಲವೂ ಆಗಿ ಎಲ್ಲವನ್ನೂ ಕಳೆದು ಚೊಕ್ಕವಾದ ತಾಜಾ ಪ್ರಕೃತಿಯೇ?" ಎಂಬಲ್ಲಿ ಪ್ರಕೃತಿ ಸ್ವರೂಪಳಾದ ಹೆಣ್ಣು ಎಂದಿಗೂ ಪುರುಷನ ಅಡಿಯಾಳಾಗುವುದು ಸಾಧ್ಯವೇ ಇಲ್ಲ ಎಂಬಂತೆ, ಇಂತಹ ಕಟ್ಟುಕತೆಗಳ ಮೂಲಕ ಪುರುಷ ಪ್ರಧಾನ ವ್ಯವಸ್ಥೆಯ ಮುಖವಾಡಗಳನ್ನು ಲೇಖಕಿ ಅನಾವರಣ ಮಾಡಿಸುತ್ತಾರೆ.

ಸಮಕಾಲೀನ ಸಂದರ್ಭದಲ್ಲಿ ಕನ್ನಡದ ಬಹುಮುಖ್ಯ ಬರಹಗಾರ್ತಿಯಾಗಿರುವ ವೈದೇಹಿಯವರು ಇಂತಹ ಹಲವಾರು ಕತೆಗಳ ಮೂಲಕ ತಮ್ಮ ಸ್ತ್ರೀಪರ ಕಾಳಜಿಯನ್ನು ಚರಿತ್ರೆಯಲ್ಲಿ ದಾಖಲಿಸುತ್ತಾರೆ.

**ಪರಾಮರ್ಶನ ಕೃತಿಗಳು:**

1. ಕರೀಗೌಡ ಬೀಚನಹಳ್ಳಿ, (2003), ಶತಮಾನದ ಸಣ್ಣಕಥೆಗಳ ಸಮೀಕ್ಷೆ, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.
2. ವೈದೇಹಿ, (1990), ಆಯ್ದ ಕಥೆಗಳು, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ.